ಆ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ,

ಇ) ಇದರ ಅಂದಾಜು ವೆಚ್ಚವೆಷ್ಟು , (ವಿವರ ನೀಡುವುದು) ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಬಂದಿದೆ

ಆ) ಮತ್ತು ಇ) ಯೋಜನೆಯ ಪ್ರಾಥಮಿಕ ತನಿಖಾ ವರದಿಯನ್ನು ತಯಾರಿಸಲು ಸೂಚಿಸಲಾಗಿದ್ದು, ಪ್ರಾಥಮಿಕ ತನಿಖೆ ಕೈಗೊಂಡ ನಂತರ ಯೋಜನೆಯ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಅವಲಂಬಿಸಿ ಅಂದಾಜು ವೆಚ್ಚವನ್ನು ನಿರ್ಧರಿಸಬಹುದಾಗಿದೆ

812 (545) ಶ್ರೀ ತಿಮ್ಮರಾಯಪ್ಪ ಕೆ ಎಂ (ಪಾವಗಡ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರಗಾಲದಿಂದ ತತ್ತರಿಸಿರುವ ಬೆಳೆ ವಿಮಾ ರಹಿತ ರೈತರಿಗೆ ಎಕರೆವಾರು ಬೆಳೆ ನಷ್ಟ ಪರಿಹಾರ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಆ) ಆಂಧ್ರಪ್ರದೇಶದಲ್ಲಿ ಶೇಂಗಾ ಬೆಳೆಯುವ ರೈತರಿಗೆ ಪರಿಹಾರ ನೀಡಿದಂತೆ ಈ ರಾಜ್ಯದ ರೈತರುಗಳಿಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಇ) ಹಾಗಿಲ್ಲದಿದ್ದಲ್ಲಿ, ರೈತರು ಸಂಕಷ್ಟಕ್ಕೆ ಈಡಾಗುತ್ತಾರೆಂಬ ಅಂಶ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 50%ಕ್ಕಿಂತ ಹೆಚ್ಚು ಬೆಳೆ ನಷ್ಟ ಸಂಭವಿಸಿದ ಪ್ರಕರಣಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ಬೆಳೆ ವಿಮಾರಹಿತ ರೈತರಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಗಳನ್ವಯ ಪರಿಹಾರ ನೀಡಲು ಅವಕಾಶವಿದೆ

ಆ) ಈ ಪ್ರಶ್ನೆಯ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

813 (1243) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರಾಯಿ ನಿಷೇಧದ ಪ್ರಸ್ತಾವನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ,

ಆ) ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಪ್ರತಿ ವರ್ಷ ಸಂದಾಯವಾಗುವ ಸರಾಸರಿ ಮೊತ್ತವೆಷ್ಟು ,

ಇ) ಸಾರಾಯಿ ನಿಷೇಧದಿಂದಾಗುವ ನಷ್ಟದ ಭರ್ತಿಗಾಗಿ ಸರ್ಕಾರ ಕಂಡುಕೊಂಡಿರುವ ಪರ್ಯಾಯ ಆದಾಯದ ಮೂಲಗಳು ಯಾವುವು ,

ಈ) ಅಂತಹ ಆದಾಯ ತರುವ ಮೂಲಗಳನ್ನು ಸರ್ಕಾರ ಗುರುತಿಸುವ ಕಾರ್ಯದಲ್ಲಿ ಮಗ್ನವಾಗಿದೆಯೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಸಾರಾಯಿ ಮಾರಾಟವನ್ನು ಸಂಪೂರ್ಣವಾಗಿ ರದ್ದುಪಡಿಸುವ ಬಗ್ಗೆ ಸರ್ಕಾರವು ಗಂಭೀರವಾದ ಚಿಂತನೆಯಲ್ಲಿದ್ದು, ಸಾರಾಯಿಯನ್ನು ರದ್ದುಪಡಿಸುವ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವ ಪೂರ್ವದಲ್ಲಿ ಇದರಿಂದಾಗುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಪರಿಗಣಿಸಬೇಕಾಗಿದೆ ಸಾರಾಯಿಯನ್ನು ರದ್ದುಪಡಿಸುವ ವಿಷಯವು ಇನ್ನು ಪರಿಶೀಲನಾ ಹಂತದಲ್ಲಿ ಇರುವುದರಿಂದ ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ನೀಡಲು ಸಾಧ್ಯತೆ ಇರುವುದಿಲ್ಲ

ಆ) ಸಾರಾಯಿ ಮಾರಾಟದಿಂದ 2003–04 ರಿಂದ 2006–07 ರವರೆಗೆ ಬಂದ ಆದಾಯವು ಈ ಕೆಳಕಂಡಂತೆ ಇರುತ್ತದೆ –

ವರ್ಷ	ಸಾರಾಯಿ ಮೂಲಗಳಿಂದ ಬಂದ ಒಟ್ಟು ಆದಾಯ (ರೂ ಕೋಟಿಗಳಲ್ಲಿ)
2003–04	1037 38
2004–05	1257 56
2005–06	1565 43
2006–07	
ಡಿಸೆಂಬರ್–2006ರ ಅಂತ್ಯದವರೆಗೆ	(ವರ್ಷದ ಗುರಿ) (ಸಂಗ್ರಹ) 1906 28 1267 98

ಇ) ಮತ್ತು ಈ) ಸಾರಾಯಿ ನಿಷೇಧದಿಂದ ರಾಜಸ್ವ ನಷ್ಟವಾಗಲಿದೆ ಆದರೆ, ಸರ್ಕಾರಕ್ಕೆ ದೊರಕಬಹುದಾದ ಹೆಚ್ಚಿನ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ನಷ್ಟವನ್ನು ಅನುಭವಿಸಲು ತಯಾರಿದೆ ಸ್ವಲ್ಪಮಟ್ಟಿಗೆ ಸರ್ಕಾರದ ಖರ್ಚನ್ನು ಕಡಿಮೆ ಮಾಡಿ ಅಲ್ಲದೆ ಬೇರೆ ರಾಜಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಖರ್ಚನ್ನು ಸರ್ಕಾರವು ಭರಿಸಲು ಚಿಂತನೆ ನಡೆಸಿದೆ

815 (1245) ಶ್ರೀ ವೈಜ್ಯನಾಥ್ ಪಾಟೀಲ್ (ಚಿಂಚೋಳಿ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಂಜುಂಡಪ್ಪ ವರದಿ ಅನುಸರಿಸಿ ಕಾಯಕ ಸಂಜೀವಿನಿ ಯೋಜನೆಯನ್ನು ಯಾವ ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ ,

ಆ) ಇದಕ್ಕಾಗಿ ತಾಲ್ಲೂಕುವಾರು ಹಂಚಿಕೆಯಾದ ಹಣಕಾಸಿನ ನೆರವು ಎಷ್ಟು ,

ಇ) ಕಾಯಕ ಸಂಜೀವಿನಿ ಯೋಜನೆ ಎಷ್ಟು ಫಲಾನುಭವಿಗಳನ್ನು ಹೊಂದಿದೆ ,

ಈ) ಈ ಯೋಜನೆಯ ಸಮರ್ಪಕ ಜಾರಿಗಾಗಿ ಸರ್ಕಾರ ಏಕೆ ಶ್ರಮಿಸುತ್ತಿಲ್ಲಾ ?